


## ಕೃತಜ್ಞತೆ

ಒಂದು ಕಾಡು. ಅಲ್ಲಿ ತುಂಬಾ ದೊಡ್ಡ ಮರಗಳು. ಅವುಗಳಲ್ಲಿ ಹಕ್ಕಿಗಳು ದಿಕ್ಕುದಿಕ್ಕುಗಳಿಂದ ಬಂದು ವಾಸ ಮಾಡುತ್ತಿದ್ದವು. ಹಕ್ಕಿಗಳಲ್ಲಿ ಬಹಳ ಒಗ್ಗಟ್ಟಿತ್ತು. ಬೇಟೆಗಾರರು ಮಾಡಿದ ಯಾವ ಉಪಾಯವೂ ಫಲಿಸುತ್ತಿರಲಿಲ್ಲ.

ಒಮ್ಮೆ ಒಬ್ಬ ಬೇಟೆಗಾರ ಬೇಟೆಗಾಗಿ ಆ ಕಾಡಿಗೆ ಬಂದ. ಕಾಡಿನಲ್ಲಿ ಸಮೃದ್ಧವಾಗಿರುವ ಮರ, ಮರದ ತುಂಬ ಇರುವ ಹಕ್ಕಿಗಳು ಇವುಗಳನ್ನೆಲ್ಲ ನೋಡಿ, ಆಸೆ, ಸಂತೋಷಗಳಿಂದ ಕುಣಿದಾಡಿದ. ಅವನು ಒಂದು ಘೋರ ವಿಷವನ್ನು ತಂದು ಅದರಲ್ಲಿ ಬಾಣವನ್ನು ನೆನೆಸಿ, ಒಣಗಿಸಿ, ನೆನೆಸಿ ಒಣಗಿಸಿ ಅದು ತುಂಬ ವಿಷಪೂರ್ಣವಾಗುವಂತೆ ಮಾಡಿದ. ಬಾಣ ತಗುಲಿದರೆ ಸಾಕು ಮರವೇ ಸುಟ್ಟುಹೋಗಬೇಕು ಹಾಗೆ ಬಾಣ ಸಿದ್ಧವಾಯಿತು. ಇಂತಹ ಬಾಣವನ್ನು ಹಿಡಿದುಕೊಂಡು ಜಂಬದಿಂದ ಬಂದ. ಬಾಣ ತಗುಲಿದ ಕೂಡಲೇ ಮರ ಎಲ್ಲಾ ಕರಕಲಾಗಿ ಮರದಲ್ಲಿದ್ದ ಹೂವು, ಕಾಯಿ, ಹಣ್ಣು, ಎಲೆ, ಚಿಗುರು, ಎಲ್ಲ ಉದುರಿ ಮರ ಬೋಳಾಯಿತು. ಎಲ್ಲ ಹಕ್ಕಿಗಳು ಬಾಣ ತಗುಲಿದ ಕ್ಷಣದಲ್ಲೇ ಬೇರೆ ಬೇರೆ ಮರಗಳಿಗೆ ಹಾರಿಹೋದವು. ಬೇಟೆಗಾರ ನಿರಾಸೆಯಿಂದ ಹಿಂತಿರುಗಬೇಕಾಯಿತು.


ಆದರೆ ಆ ಕರಕಲು ಮರವನ್ನು ಬಿಟ್ಟು, ಒಂದು ಹಕ್ಕಿ ಹೋಗಲೇ ಇಲ್ಲ. ಕಾಡಿನಲ್ಲಿ ಬೇಕಾದಷ್ಟು ಹಣ್ಣು ಹೂವುಗಳಿಂದ ತುಂಬಿದ ಮರಗಳಿದ್ದರೂ ಈ ಹಕ್ಕಿ ಇದೇ ಮರದ ತುಟ್ಟತುದಿಯ ಕೊಂಬೆಯಲ್ಲಿ ಕುಳಿತೇ ಕಾಲ ಕಳೆಯುತ್ತಿತ್ತು.

ಇಂದ್ರನಿಗೆ ಈ ಹಕ್ಕಿಯನ್ನು ಪರೀಕ್ಷಿಸಬೇಕೆನಿಸಿತು. ಅವನು ಒಬ್ಬ ಮುದುಕನ ವೇಷದಲ್ಲಿ ಹಕ್ಕಿಯ ಬಳಿ ಬಂದು ಕೇಳಿದ—"ಹಕ್ಕಿಯೇ! ಕಾಡಿನಲ್ಲಿ ಹಸಿರಿನಿಂದ ತುಂಬಿರುವ ಬೇಕಾದಷ್ಟು ಮರಗಳು ಇರುವಾಗ, ಈ ಮರವನ್ನು ಬಿಡದೆ, ಯಾವ ರಕ್ಷಣೆಯಿಲ್ಲದೆ ಇಲ್ಲೇ ಏಕೆ ಇರುವೆ?" ಎಂದು.

ಆಗ ಹಕ್ಕಿ ಹೇಳಿತು—"ನೋಡು ತಾತ! ನಾನು ಮೊಟ್ಟೆಯಿಂದ ಹೊರ ಬಂದಾಗಿನಿಂದ ಇಲ್ಲೇ ಇದ್ದೆ. ಈ ಮರದಲ್ಲೇ ಕುಪ್ಪಳಿಸಿದೆ, ನೆಗೆದೆ, ಕುಣಿದಾಡಿದೆ, ಹಾರಲು ಕಲಿತೆ, ಸ್ನೇಹಿತರೊಡನೆ ಆಟವಾಡಿದೆ, ಹಣ್ಣು ಹೂಗಳನ್ನು ತಿಂದು ಬೆಳೆದೆ. ನನ್ನ ತಂದೆತಾಯಿಗಳೂ ನನ್ನ ತಾತ ಅಜ್ಜಿ ಬಂಧು ಬಳಗ ಎಲ್ಲಾ ಇಲ್ಲೇ ಇದ್ದರಂತೆ. ನಮಗೆಲ್ಲ ಇದು ಬಹಳ ಕಾಲದಿಂದ ಆಶ್ರಯ ಕೊಟ್ಟಿದೆ. ಆದುದರಿಂದ ಇಲ್ಲೇ ಇದ್ದೇನೆ "— ಎಂದು.

ಆಗ ಮತ್ತೆ ಮುದುಕ—"ಇಲ್ಲಿ ನಿನಗೆ ರಕ್ಷಣೆಯಿಲ್ಲ. ಈ ಮರದಿಂದ ಯಾವ ಪ್ರಯೋಜನವೂ ಇಲ್ಲ. ಶತ್ರುಗಳು ಯಾವಾಗ ಬೇಕಾದರೂ ಕಚ್ಚಿಕೊಂಡು ಹೋಗಬಹುದು. ಆದುದರಿಂದ ಈ ಮರವನ್ನು ಬಿಟ್ಟು, ಎಲೆ ಹೂವು ಹಣ್ಣುಗಳಿಂದ ಸಮೃದ್ಧವಾಗಿರುವ ಇನ್ನೊಂದು ಮರದಲ್ಲಿ ವಾಸಿಸು. ಯಾವ ಪ್ರಯೋಜನಕ್ಕೂ ಬರದ ಈ ಕರಕಲು ಮರದಿಂದ ಪ್ರಯೋಜನವೇನು?"—ಎಂದು ಒತ್ತಾಯ ಮಾಡುತ್ತಾ ಹೇಳಿದ. ಆಗ ಹಕ್ಕಿ ಹೇಳಿತು—"ತಾತ, ನಿಮ್ಮ ಮಾತು ಸರಿಯಿಲ್ಲ. ಚೆನ್ನಾಗಿದ್ದಾಗ ಆಶ್ರಯಿಸಿ ಕಷ್ಟ ಬಂದಾಗ ಇದನ್ನು ಬಿಟ್ಟು ಹೋಗುವುದು ಎಳ್ಳಷ್ಟೂ ಸರಿಯಲ್ಲ. ನನಗೆ ಕಷ್ಟ ಬಂದರೆ ಬರಲಿ. ನಮಗೆ ಎಲ್ಲ ರೀತಿ ಸಹಾಯ ಮಾಡಿದ ಈ ಮರವನ್ನು ನಾನು ಬಿಡುವುದಿಲ್ಲ" ಎಂದು.

ಆಗ ಇಂದ್ರ ತನ್ನ ನಿಜರೂಪ ತೋರಿಸಿ, "ನಿನ್ನ ನಿಷ್ಠೆಗೆ ನಾನು ಮೆಚ್ಚಿದ್ದೇನೆ. ಏನು ಬೇಕಾದರೂ ವರ ಕೇಳು" ಎಂದು ಹಕ್ಕಿಗೆ ಹೇಳಿದ. ಆ ಹಕ್ಕಿ ಬೇರೆ ಏನನ್ನೂ ಬೇಡದೆ ನಮಗೆ ಅನ್ನ ರಕ್ಷಣೆಗಳನ್ನಿತ್ತು ಪೋಷಿಸಿದ ಈ ಮರ ಮತ್ತೆ ಮೊದಲಿನಂತಾಗಲಿ ಎಂದು ಬೇಡಿಕೊಂಡಿತು. ಇಂದ್ರ ಸಂತೋಷದಿಂದ ಹಕ್ಕಿಯ ಆಸೆ ನೆರವೇರಿಸಿದ. ಆ ಮರ ಮತ್ತೆ ಮೊದಲಿನಂತೆ ಹಕ್ಕಿಗಳ ಚಿಲಿಪಿಲಿ ನಾದದಿಂದ ಕೂಡಿ ಮಧುರಮಯವಾಯಿತು. (ಸಾಧಾರ)



ಕಲೆ : ಸೋಮಶೇಖರ